OS No. 76/2021

PW-1

**(ಇಂದು ದಿಃ 07-03-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**<u>ಪಾಟೀ ಸವಾಲುಃ- ಪ್ರತಿವಾದಿ ಪರ ಶ್ರೀ.RM ವಕೀಲರಿಂದಃ-</u>**

1ನೇ ಪ್ರತಿವಾದಿಯ ತಾಯಿಯ ಹೆಸರು ಶರಣಮ್ಮ, ಶರಣಮ್ಮಳ ಗಂಡ ಈರಪ್ಪ ಶರಣಮ್ಮ ತೀರಿಹೋಗಿ ಸುಮಾರು 40-45 ವರ್ಷ ಆಗಿರಬಹುದು ಎಂದರೆ ಸರಿ. ಶರಣಮ್ಮಳಿಗೆ ನಾಗಮ್ಮ ಮತ್ತು ಸಿದ್ದಮ್ಮ ಇಬ್ಬರು ಮಕ್ಕಳು. ನಾಗಮ್ಮಳಿಗೆ 4 ಜನ ಹೆಣ್ಣು ಮಕ್ಕಳು 3 ಜನ ಗಂಡು ಮಕ್ಕಳು. ಅವುರುಗಳೆಂದರೆ 2ನೇ ವಾದಿ, 3ನೇ ವಾದಿ, 6ನೇ ಪ್ರತಿವಾದಿ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು 1ನೇ ವಾದಿ ಕೂಡ ನಾಗಮ್ಮಳ ಮಗಳು ಎಂದು ಹೇಳುತ್ತಾರೆ. ನಾಗಮ್ಮಳ ಗಂಡನ ಹೆಸರು ವೀರಭದ್ರಪ್ಪ ಎಂದರೆ ಸರಿ. 1ನೇ ಪ್ರತಿವಾದಿ ಗಂಡನ ಹೆಸರು ಕೂಡ ವೀರಭದ್ರಪ್ಪ ಎಂದರೆ ಸರಿ. 1ನೇ ಪ್ರತಿವಾದಿಗೆ ಒಬ್ಬಳೆ ಮಗಳು 8ನೇ ಪ್ರತಿವಾದಿ ಎಂದರೆ ಸರಿ. 1ನೇ ಪ್ರತಿವಾದಿಗೆ ಕಣ್ಣು ಕಾಣುವುದಿಲ್ಲ ಎಂದರೆ ಸರಿ. 1ನೇ ಪ್ರತಿವಾದಿ ವೀರಭದ್ರಪ್ಪನ ಮೊದಲ ಹೆಂಡತಿ ಮತ್ತು ನಾಗಮ್ಮ 2ನೇ ಹೆಂಡತಿ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ನಾಗಮ್ಮ ಮೊದಲನೆ ಹೆಂಡತಿ 1ನೇ ಪ್ರತಿವಾದಿ 2ನೇ ಹೆಂಡತಿ ಎಂದು ಹೇಳುತ್ತಾರೆ. ನಾಗುವ್ಮಳನ್ನು ಮುಂಚೆ ತೆಲಗಾಂಣದ ತಿಪ್ಪಣನಿಗಿ ಕೊಟು ಮದುವ ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ನಾಗಮ್ಮ ಮತ್ತು ತಿಪ್ಪಣ್ಣ ರವರ ದಾಂಪತ್ಯದಿಂದ 1ನೇ ವಾದಿ ಜನಿಸಿದ್ದರು ಎಂದರೆ ಸರಿಯಲ್ಲ, 1ನೇ ಪ್ರತಿವಾದಿ ವೀರಭದ್ರಪ್ಪನ ಮೊದಲನೇ ಹೆಂಡತಿ ಎಂದರೆ ಸರಿಯಲ್ಲ, ತಿಪ್ಪಣ್ಣ ತಿರಿಹೋದ ನಂತರ ನಾಗಮ್ಮ ಶಕ್ಲಾಸಪಲ್ಲಿಯ ತವರು ಮನೆಗೆ ಬಂದು ಇದ್ದರು ಎಂದರೆ ಸರಿಯಲ್ಲ, ಮೊದಲನೆ ಹೆಂಡತಿ 1ನೇ ಪ್ರತಿವಾದಿಗೆ ಕಣ್ಣು ಕಾಣದ ಕಾರಣ ನಾಗಮ್ಮಳನ್ನು ವೀರಭದ್ರಪ್ಪನಿಗೆ 2ನೇ ಹೆಂಡತಿಯಾಗಿ ಮದುವೆ ಮಾಡಿದ್ದರು ಎಂದರೆ ಸರಿಯಲ್ಲ, ವೀರಭದ್ರಪ್ಪ ಮತ್ತು ನಾಗಮ್ಮ ರವರ ದಾಂಪತ್ಯದಿಂದ ಶಾಂತಮ್ಮ, ಬಸಮ್ಮ ಮತ್ತು ಮಹಾದೇವಮ್ಮ ಜನಿಸಿದ್ದಾರೆ ಎಂದರೆ ಸರಿ. ವೀರಭದ್ರಪ್ಪ ಪೋಲಿಸ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಆತ ಕರ್ತವ್ಯದಲ್ಲಿರುವಾಗಲೆ ತೀರಿಹೋದ ಎಂದರೆ ಸರಿ. ಆತ ತೀರಿಹೋದ ನಂತರ 3 ನೇ ಪ್ರತಿವಾದಿ ಗಂಡ ಚಂದ್ರಶೇಖರ ರವರಿಗೆ ಅನುಕಂಪದ ಆಧಾರ ಮೇಲೆ ನೌಕಾರಿ ಸಿಕ್ಕಿತು ಎಂದರೆ ಸರಿ.

OS No. 76/2021

PW-1

1ನೇಪ್ರತಿವಾದಿಯ ವ್ಯವಸ್ಥೆಯನ್ನು 8ನೇ ಪ್ರತಿವಾದಿ ಮಾಡುತ್ತಾರೆ ಎಂದರೆ ಸರಿ. ದಾವಾ ಸ್ವತ್ತುಗಳು 1ನೇ ಪ್ರತಿವಾದಿಯ ತಾಯಿಯ ಜಮೀನುಗಳು ಎಂದರೆ ಸರಿ. ದಾವಾ ಸ್ವತ್ತುಗಳಲ್ಲಿ ವಾದಿಯರಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಾನು 1 ಮತ್ತು 8ನೇ ಪ್ರತಿವಾದಿಯರಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. 1ನೇಪ್ರತಿವಾದಿ ವೀರಭದ್ರಪ್ಪನ ಹಿರಿಯ ಹೆಂಡತಿ ಎಂದರೆ ಸರಿಯಲ್ಲ.

**(ಪ್ರತಿವಾದಿ ಪರ ವಕೀಲರ ವಿನಂತಿ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**